# ಸೆಕಂಡರಿ ಅಗ್ರಿಕಲ್ಚರ್

ಕರ್ನಾಟಕ ರಾಜ್ಯದ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸೆಕಂಡರಿ ಕೃಷಿ ನಿರ್ದೇಶನಾಲಯವು **ಮಾನ್ಯ ಮುಖ್ಯ ಮಂತ್ರಿಗಳ ಮಹತ್ವಾಕಾಂಕ್ಷಿ** ಪರಿಕಲ್ಪನೆಯಾಗಿರುತ್ತದೆ.

ಕೃಷಿಯ ಪ್ರಾಥಮಿಕ ಉತ್ಪನ್ನಗಳನ್ನು, ಸ್ಥಳೀಯ ಮಾನವ ಸಂಪನ್ಮೂಲ ಮತ್ತು ಕೌಶಲ್ಯಗಳನ್ನು ಬಳಸಿ ಮೌಲ್ಯವರ್ಧನೆ ಮಾಡುವ ಹಾಗೂ ಅದರಿಂದ ರೈತರಿಗೆ ಹೆಚ್ಚಿನ ಆದಾಯ ಒದಗಿಸುವ ಚಟುವಟಿಕೆ/ಕಾರ್ಯಗಳನ್ನು ಸೆಕೆಂಡರಿ ಕೃಷಿ ಎಂದು ವ್ಯಾಖ್ಯಾನಿಸಲಾಗಿದೆ.

ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಹೆಚ್ಚಿನ ಆದಾಯ ತರಲು ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಪೂರಕವಾಗಿ, ಕೃಷಿ ಉತ್ಪನ್ನಗಳಿಂದ ಉಪ ಉತ್ಪನ್ನಗಳ ತಯಾರಿಕೆಗೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಲು ಸುಸ್ಥಿರ ಹಾಗೂ ಕ್ರೂಢೀಕೃತ ವ್ಯವಸ್ಥೆಗಾಗಿ ಪ್ರತ್ಯೇಕ ರಾಜ್ಯ ಸೆಕೆಂಡರಿ ಕೃಷಿ ನಿರ್ದೇಶನಾಲಯವನ್ನು ಸರ್ಕಾರದ ಆದೇಶ ಸಂ: ಎ ಎಸ್ ಸಿ/73/2021(ಪಿ-3), ಬೆಂಗಳೂರು, ದಿನಾಂಕ: 18-01-2022 ರಂತೆ ಅಧಿಸೂಚಿಸಲಾಗಿದೆ.

ನಿರ್ದೇಶನಾಲಯಕ್ಕೆ ಪೂರ್ಣಾವಧಿಯ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಕೃಷಿ ಹಾಗೂ ಪೂರಕ ಚಟುವಟಿಕೆಗಳಿಗೆ ಕೊಡುಗೆ ನೀಡುವ ಇಲಾಖೆಗಳ ಸಹಯೋಗದಲ್ಲಿ ಅನುಷ್ಠಾನಗೊಳ್ಳಲು ಅನುವಾಗುವಂತೆ ಹಾಗೂ ಶ್ರಮ ಒಗ್ಗೂಡುವಂತೆ ಕೃಷಿ, ಜಲಾನಯನ ಅಭಿವೃದ್ಧಿ, ಪಶುಸಂಗೋಪನೆ, ತೋಟಗಾರಿಕೆ, ಕೃಷಿ ಮಾರುಕಟ್ಟೆ ಹಾಗೂ ಇನ್ನಿತರೆ ಅಧಿಕಾರಿಗಳನ್ನು ಒಳಗೊಂಡಿರುತ್ತದೆ.

ಈ ನಿರ್ದೇಶನಾಲಯವು ಮಾರ್ಗದರ್ಶನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ **ರಾಜ್ಯಮಟ್ಟದ ಚಾಲನಾ ಸಮಿತಿ** ಹಾಗೂ ಸೆಕೆಂಡರಿ ಕೃಷಿ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ **ಜಿಲ್ಲಾ ಮಟ್ಟದ ಸಮಿತಿಯನ್ನು** ಒಳಗೊಂಡಿರುತ್ತದೆ.

ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆವಾರು ವಿಷಯತಜ್ಞರು ಹಾಗೂ ಪರಿಣಿತರೊಳಗೊಂಡಂತೆ, ಪ್ರತ್ಯೇಕ **ಕಾರ್ಯಪಡೆ ರಚಿಸಲು** ಹಾಗೂ ಕ್ರಿಯಾ ಯೋಜನೆ

ರೂಪಿಸಲು ಸೂಚಿಸಲಾಗಿರುತ್ತದೆ. ಸದರಿ ಕಾರ್ಯಪಡೆಗಳು ಜಿಲ್ಲಾವಾರು ಅವಶ್ಯವಿರುವ ಕ್ರಿಯಾಯೋಜನೆಯನ್ನು ರೂಪಿಸಿ ರಾಜ್ಯ ಮಟ್ಟದ ಸೆಕಂಡರಿ ಕೃಷಿ ನಿರ್ದೇಶನಾಲಯಕ್ಕೆ ಸಲ್ಲಿಸಿ ರಾಜ್ಯ ಮಟ್ಟದ ಚಾಲನಾ ಸಮಿತಿಯಿಂದ ಅನುಮೋದನೆ ಪಡೆದು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತದೆ

ಸೆಕಂಡರಿ ನಿರ್ದೇಶನಾಲಯವು ಕರ್ನಾಟಕ ರಾಜ್ಯದ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಪ್ರಮುಖ ಸಂಸ್ಥೆಯಾಗಿರುತ್ತದೆ.

ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ-ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಮೌಲ್ಯವರ್ದನೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರ್ಯಾಂಡ್ ಮೂಲಕ ಮಾರುಕಟ್ಟೆ ಕಲ್ಪಿಸುವುದು ಸೆಕಂಡರಿ ಅಗ್ರಿಕಲ್ಚರ್ ನ ಮುಖ್ಯ ದ್ಯೆಯೋದ್ದೇಶವಾಗಿದೆ.

**ಸೆಕಂಡರಿ ಅಗ್ರಿಕಲ್ಚರ್ ಮಾರ್ಗೋಪಾಯಗಳು ಈ ಕೆಳಕಂಡಂತಿವೆ.**

1. ಉತ್ಪಾದಿತ ಬೆಳೆಗಳ ಮೌಲ್ಯವರ್ಧನೆ
2. ಪರ್ಯಾಯ ಉದ್ಯಮಗಳಿಗೆ ಉತ್ತೇಜನ
3. ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶು ಸಂಗೋಪನಾ ತ್ಯಾಜ್ಯಗಳ ಬಳಕೆ

**ವಿವರ ಕೆಳಗಿನಂತಿದೆ**

**I. ಉತ್ಪಾದಿತ ಬೆಳೆಗಳ ಮೌಲ್ಯವರ್ಧನೆ:**

**ಉದಾ.**

**1. ಪರಿಕರ –ಕೇಂದ್ರಿತ ಚಟುವಟಿಕೆಗಳು:**

- ✓ **ಸಾವಯವ ಗೊಬ್ಬರ ತಯಾರಿಕೆ:** ಎರೆಗೊಬ್ಬರ ತಯಾರಿಕೆ, ಕಾಂಪೋಸ್ಟ್ ತಯಾರಿಕೆ, ಜೈವಿಕ ಗೊಬ್ಬರ ಉತ್ಪಾದನೆ,
- ✓ ತೋಟಗಾರಿಕೆ/ಹೂವು / ಅರಣ್ಯ/ಕೃಷಿ ಬೆಳೆಗಳ ನರ್ಸರಿ
- ✓ ಜೈವಿಕ ಕೀಟನಾಶಕಗಳ ತಯಾರಿಕೆ
- ✓ ನೀರು ಮತ್ತು ಮಣ್ಣು ಪರೀಕ್ಷೆ/ವಿಶ್ಲೇಷಣೆ
- ✓ ಪಶು ಆಹಾರ /ಮೇವು ಉತ್ಪಾದನೆ...ಇತ್ಯಾದಿ

**2. ಕಟಾವು ನಂತರ-ಮೌಲ್ಯವರ್ದನೆ ಕೇಂದ್ರಿತ ಚಟುವಟಿಕೆಗಳು:**

- ✓ ಹೂವು/ಹಣ್ಣು/ಸಾಂಬಾರು ಪದಾರ್ಥಗಳ ...ಇತ್ಯಾದಿ ಗಳನ್ನು ಪೂರ್ವ ಸಿದ್ಧತೆಗೊಳಿಸಿ ಮಾರುಕಟ್ಟೆಗೆ ತಲುಪಿಸುವುದು

- ✓ ಅತಿ ಸಣ್ಣ/ ಸಣ್ಣ ಉದ್ದಿಮೆಗಳಾದ ಉಪ್ಪಿನಕಾಯಿ, ಜಾಮ್ ತಯಾರಿಕೆ, ಅರಿಶಿನ ಪುಡಿ, ಶುಂಠಿ/ಬೆಳ್ಳುಳ್ಳಿ ಪೇಸ್ಟ್ ಇತ್ಯಾದಿ
- ✓ ಬಾಡಿಗೆ ಆದಾರಿತ ಸೇವಾ ಕೇಂದ್ರಗಳು
- ✓ ಅಗ್ರಿ ಟೂರಿಸಂ
- ✓ ಆಯುಷ್ ಮೆಡಿಸಿನ್ಸ್, ನೇಯ್ಗೆ ಉತ್ಪನ್ನಗಳು, ಸುಗಂಧ ದ್ರವ್ಯ , ಡೈ ಗಳು...

## II. ಪರ್ಯಾಯ /ಪೂರಕ ಉದ್ಯಮಗಳಿಗೆ ಉತ್ತೇಜನ:

- ✓ ಜೇನುಸಾಕಣೆ
- ✓ ಬೇವಿನ ಉತ್ಪನ್ನಗಳು
- ✓ ಕಾರ್ನ ಪೌಡರ್ ತಯಾರಿಕೆ
- ✓ ಹೈಡ್ರೋಪೋನಿಕ್ಸ್
- ✓ ಕೈತೋಟ
- ✓ ಅಡಿಕೆ, ತೆಂಗು,ಬಾಳೆ: ನಾರಿನ ಉತ್ಪನ್ನಗಳು
- ✓ ಅಲೋವೆರಾ ಉತ್ಪನ್ನಗಳು,
- ✓ ಬಿದಿರು ಉತ್ಪನ್ನಗಳು
- ✓ ಅಂಟು ಉತ್ಪಾದನೆ
- ✓ ರೇಷ್ಮೆ ಉತ್ಪನ್ನಗಳು
- ✓ ಕುರಿ ಮರಿ ಹೊಸ ತಳಿ ಸಾಕಣೆ/ಹೋರಿ ಸಾಕಣೆ..
- ✓ ಡಯಾಂಚ ಬೆಳೆಸುವುದು

## 3. ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶು ಸಂಗೋಪನಾ ತ್ಯಾಜ್ಯಗಳ ಮರುಬಳಕೆ

- ✓ ಹತ್ತಿ ಬೆಳೆ ಉಳಿಕೆಯ ಉತ್ಪನ್ನಗಳು
- ✓ ಹತ್ತಿ/ಭತ್ತದ ಉಳಿಕೆಯಿಂದ ಪೈಬರ್ ಬೋರ್ಡ ತಯಾರಿಕೆ
- ✓ ಕತ್ತಾಳೆ/ಬಾಳೆ ನಾರಿನ ಉತ್ಪನ್ನಗಳು
- ✓ ಅಡಿಕೆ ಹಾಳೆ ಉತ್ಪನ್ನಗಳು
- ✓ ಬಯೋಗ್ಯಾಸ್ ಉತ್ಪಾದನೆ
- ✓ ಯೂರಿಯಾ ಲೇಪಿಸಿದ ಮೇವಿನ ಬ್ಲಾಕ್ ಗಳ ತಯಾರಿಕೆ
- ✓ ಕಬ್ಬು ಸೋಗೆಯಿಂದ ಉತ್ಪನ್ನಗಳ ತಯಾರಿಕೆ

## ಸೆಕೆಂಡರಿ ಕೃಷಿಯಲ್ಲಿ

1. ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ-ಉತ್ಪನ್ನಗಳ ಕಚ್ಚಾ ವಸ್ತುವಾಗಿ ಬಳಸಿಕೊಂಡು ಉತ್ಪಾದಕ ಚಟುವಟಿಕೆ ಮಾಡುವುದು.

2. ಸ್ಥಳೀಯವಾಗಿ ಲಭ್ಯವಿರುವ ಮಾನವ ಸಂಪನ್ಮೂಲ ಬಳಕೆಗಾಗಿ ಕೌಶಲ್ಯ ತರಬೇತಿಗಳನ್ನು ನೀಡಿ ಉದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.

3. MSMED ಕಾಯಿದೆ 2006 ಅಡಿಯಲ್ಲಿ ವರ್ಗೀಕರಿಸಲಾದ ಸಣ್ಣ ಅಥವಾ ಮದ್ಯಮ ಉದ್ಯಮಗಳ ಅಭಿವೃದ್ಧಿ

ಸೆಕೆಂಡರಿ ಕೃಷಿಯಲ್ಲಿ **ಸೇರ್ಪಡಿಸಲಾದ** (Inclusions) ಮತ್ತು ಸೇರ್ಪಡಿಸಲಾದ (Exclusions) ಚಟುವಟಿಕೆಗಳು: ಉದಾಹರಣೆಗಳು ಕೆಳಗಿನಂತಿದೆ

| **ಕ್ರ. ಸಂ** | **ಉತ್ಪನ್ನದ ಹೆಸರು** | ಸೆಕೆಂಡರಿ ಕೃಷಿಯಡಿ ಸೇರ್ಪಡಿಸಲಾದ (Inclusions) | ಸೆಕೆಂಡರಿ ಕೃಷಿಯಡಿ ಸೇರ್ಪಡಿಸಲಾಗದ (Exclusions) |
|---|---|---|---|
| 1 | ಹತ್ತಿ | ಸ್ಥಳೀಯ ಮಾನವ ಸಂಪನ್ಮೂಲಗಳನ್ನು ಬಳಸಿ ಮತ್ತು MSME ನಿಯಮಗಳ ಅಡಿಯಲ್ಲಿ ಬಂಡವಾಳ ಹೂಡಿಕೆಗೆ ಮಾನದಂಡಗಳೊಳಗೆ ಬರುವ ಹತ್ತಿ ಜಿನ್ನಿಂಗ್ ಘಟಕ, ಸ್ಥಳೀಯವಾಗಿ ಬೆಳೆದ ಹತ್ತಿಯಿಂದ ಲಿಂಟ್ ಮತ್ತು ಬೀಜವನ್ನು ಪ್ರತ್ಯೇಕಿಸುವುದು, ಸೆಕೆಂಡರಿ ಕೃಷಿ ಎಂದು ಅರ್ಹತೆ ಪಡೆಯುತ್ತದೆ. | ಅತಿ ಹೆಚ್ಚಿನ ಬಂಡವಾಳ ಹೂಡಿಕೆಯೊಂದಿಗೆ , ಬೇರೆ ದೇಶಗಳಿಂದ ಆಮದು ಮಾಡಲಾದ ಕಚ್ಚಾ ವಸ್ತುಗಳ ಬಳಕೆಯಿಂದ ಸ್ಥಾಪಿಸಲಾದ ಹತ್ತಿ ಜವಳಿ ಕಾರ್ಖಾನೆಯು ಸೆಕೆಂಡರಿ ಕೃಷಿ ಎಂದು ಅರ್ಹತೆ ಪಡೆಯುವುದಿಲ್ಲ. |
| 2 | ಕಬ್ಬು | ಕಬ್ಬು ಬೆಳೆಯುವ ಪ್ರದೇಶದಲ್ಲಿ ಬೆಲ್ಲ ತಯಾರಿಸುವ ಘಟಕವು ಸೆಕೆಂಡರಿ ಕೃಷಿಯಾಗಿದೆ | ಆದರೆ ಇತರ ಪ್ರದೇಶಗಳಿಂದ ಕಬ್ಬು \ ಕಾಕಂಬಿಯನ್ನು ಸಂಗ್ರಹಿಸಿ ಸಂಸ್ಕರಣಾ ಘಟಕದ ಸ್ಥಾಪನೆ ಹಾಗೂ ಇಥೆನಾಲ್ ಸ್ಥಾಪನೆ ಮಾಡುವ ಘಟಕಗಳು |
| 3 | ತೋಟಗಾರಿಕೆ ಉಪ ಉತ್ಪನ್ನಗಳು | ಜಾಮ್, ಉಪ್ಪಿನಕಾಯಿ, ಚಿಪ್ಸ್, ಖಾದಿ ಉತ್ಪನ್ನಗಳು ಇತ್ಯಾದಿಗಳನ್ನು ಸ್ಥಳೀಯ ಕಾರ್ಮಿಕರನ್ನು ನೇಮಿಸಿಕೊಂಡು ಒಂದು ಗ್ರಾಮೋದ್ಯಮ ರೀತಿಯ ಘಟಕವು ಸೆಕೆಂಡರಿ ಕೃಷಿಯಾಗಿದೆ, | ಆದರೆ ಇತರ ದೇಶಗಳಿಂದ ಅಥವಾ ಇತರ ಸ್ಥಳಗಳಿಂದ ತರಿಸಲಾದ ಕಚ್ಚಾವಸ್ತುಗಳನ್ನು ಉಪಯೋಗಿಸಿಕೊಂಡು ಮಾಡುವ ಸ್ವಯಂಚಾಲಿತ ಅಸೆಪ್ಟಿಕ್ ಪಲ್ಪಿಂಗ್ ಮತ್ತು ಜ್ಯೂಸಿಂಗ್ ಮಾದರಿಯ ಕಾರ್ಖಾನೆಯಲ್ಲ. |
| 4 | ಗೋಡಂಬಿ | ಸ್ಥಳೀಯವಾಗಿ/ ನೆರೆಹೊರೆಯ ಪ್ರದೇಶದಲ್ಲಿ ಇರುವ ಬೆಳೆಗಾರರಿಂದ ಸಂಸ್ಕರಿಸಿ ಪ್ಯಾಕೇಟ್ ಮಾಡಲಾದ ಗೋಡಂಬಿ ಸಂಸ್ಕರಣಾ ಘಟಕವು ಸೆಕೆಂಡರಿ ಕೃಷಿಯಾಗಿದೆ, | ಆದರೆ , ವಿದೇಶಿ ಬೆಳೆಗಾರರಿಂದ ಕಚ್ಚಾ ಗೋಡಂಬಿಯನ್ನು ಪಡೆದು ಮಾಡಲಾದ ಸಂಸ್ಕರಣಾ ಘಟಕವು ಸೆಕೆಂಡರಿ ಕೃಷಿ ಎಂದು ಅರ್ಹತೆ ಪಡೆಯುವುದಿಲ್ಲ. |
| 5 | ಆಯುರ್ವೇದ ಉತ್ಪನ್ನಗಳು | ಒಂದು ಗ್ರಾಮೋದ್ಯಮವಾಗಿ ನ್ಯಾಚುರೋಪತಿ ಅಥವಾ ಘಟಕವು ಸೆಕೆಂಡರಿ ಕೃಷಿಯಾಗಿದೆ, | ಆದರೆ, ಆಯುರ್ವೇದ ಉತ್ಪನ್ನಗಳನ್ನು ಉತ್ಪಾದಿಸುವ ಘಟಕವು ಸ್ವಯಂಚಾಲಿತವಾಗಿ ಪ್ಯಾಕಿಂಗ್ ಮಾಡಲಾಗುವ ಕೈಗಾರಿಕಾ ಘಟಕವಾಗಿದ್ದರೆ ಸೆಕೆಂಡರಿ ಕೃಷಿಯಾಗುವುದಿಲ್ಲ |

## ರೈತರ ಆದಾಯ ದ್ವಿಗುಣಗೊಳಿಸುವ (DFI) ಸಮಿತಿಯ ಅಭಿಪ್ರಾಯದಲ್ಲಿ

1. ಗ್ರಾಮೀಣ ಮಟ್ಟದಲ್ಲಿ ಗುಡಿ ಕೈಗಾರಿಕೆ ಎಂದು ಪರಿಗಣಿಸಬಹುದಾದ ಚಟುವಟಿಕೆಯು ಸ್ಥಳಿಯ ಹಾಗೂ ಸುತ್ತಮುತ್ತಲಿನ ರೈತರ ಆರ್ಥಿಕ ಮಟ್ಟ ಹೆಚ್ಚಳಕ್ಕೆ ಕೊಡುಗೆ ನೀಡುವ ಪ್ರಮಾಣದಲ್ಲಿ ಇದ್ದರೆ ಸೆಕೆಂಡರಿ ಕೃಷಿ ಎಂದು ವಿವರಿಸಲಾಗಿದೆ

2. ಸ್ಥಳೀಯವಾಗಿ/ಸುತ್ತಮುತ್ತಲಿನ ಪ್ರದೇಶದಲ್ಲಿ ಲಭ್ಯವಾಗುವ ಮೂಲ/ಕಚ್ಚಾ ವಸ್ತುಗಳನ್ನು , ಮಾನವ ಶಕ್ತಿ, ಕೌಶಲ್ಯಗಳನ್ನು ಮೂಲವಾಗಿ ಸದುಪಯೋಗಪಡಿಸಿಕೊಂಡು ಅಳವಡಿಸುವ ಸಮಗ್ರ ಚಟುವಟಿಕೆಗಳು, ಸೆಕೆಂಡರಿ ಕೃಷಿಯಡಿ ಪರಿಗಣಿಸಬಹುದಾಗಿದೆ.

3. ಜೇನುಸಾಕಣೆ, ಜೈವಿಕ ಗೊಬ್ಬರ ಘಟಕಗಳು, ಸಾವಯವ ಬಣ್ಣ ಅಥವಾ ಡೈ ತಯಾರಿಕೆ, ಅಣಬೆ , ರೇಷ್ಮೆ ಹುಳು ಸಾಕಣೆ, ನರ್ಸರಿಗಳು, ಇತ್ಯಾದಿಗಳಂತಹ ಸಣ್ಣ ಪ್ರಮಾಣದ ಚಟುವಟಿಕೆಗಳು ಸೆಕೆಂಡರಿ ಕೃಷಿಗೆ ಉತ್ತಮ ಉದಾಹರಣೆಗಳಾಗಿವೆ

4. ರೇಸ್‌ಕುದುರೆಗಳ ಸಾಕಣೆ, ವನ್ಯಜೀವಿ ಮೀಸಲು ಪ್ರದೇಶಗಳ ಅಭಿವೃದ್ಧಿ , ದೊಡ್ಡ ಔಷಧೀಯ ಮತ್ತು ಕೃಷಿ-ರಾಸಾಯನಿಕ ಉದ್ಯಮಗಳು, ದೊಡ್ಡ ಕೃಷಿ ಕೈಗಾರಿಕೆಗಳನ್ನು ಸೆಕೆಂಡರಿ ಕೃಷಿಯಾಗಿ ಪರಿಗಣಿಸುವುದಿಲ್ಲ.

5. ಸ್ಥಳೀಯವಾಗಿ ಉತ್ಪಾದಿಸಲಾದ ಕಚ್ಚಾ ವಸ್ತುವು ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಸಂಸ್ಕರಣೆಗೆ ಒಳಗಾಗಿದ್ದರೆ ಮತ್ತು ಅಂತಹ ಕಚ್ಚಾವಸ್ತುಗಳಿಂದ ಮೌಲ್ಯವರ್ಧಿತಗೊಳಿಸಿದ ಪ್ರಾಥಮಿಕ ಉತ್ಪಾದನೆಯನ್ನು ಉದ್ಯಮಕ್ಕೆ ಸರಬರಾಜು ಮಾಡಿದರೆ ಸೆಕೆಂಡರಿ ಕೃಷಿಗೆ ಪರಿಗಣಿಸಬಹುದಾಗಿದೆ.

******